
# ಸರ್ಕಾರದ ಭಾಷಣ ರಾಜ್ಯಪಾಲರು ಕಡ್ಡಾಯವಾಗಿ ಓದಬೇಕು: ಹೊರಟ್ಟಿ

ಬೆಂಗಳೂರು: ಸಂವಿಧಾನದ ಅನುಚ್ಛೇದ 176ರ ಪ್ರಕಾರ ಸರ್ಕಾರ ಸಿದ್ಧಪಡಿಸಿಕೊಟ್ಟಿರುವ ಭಾಷಣವನ್ನು ರಾಜ್ಯಪಾಲರು ಕಡ್ಡಾಯವಾಗಿ ಮಂಡಿಸಬೇಕು. ಅದರಲ್ಲಿ ಕೈ ಬಿಡುವ ಅವಕಾಶವಿಲ್ಲ ಎಂದು ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಭಾಧ್ಯಕ್ಷರು ಮತ್ತು ಸಭಾಪತಿಗಳಿಗೆ ಕಡತದಿಂದ ತೆಗೆಯುವ ಅಧಿಕಾರವಿರುತ್ತದೆ. ಆದರೆ, ಜಂಟಿ ಅಧಿವೇಶನದ ಭಾಷಣದಲ್ಲಿ ಆ ರೀತಿ ಮಾಡುವ ಅಧಿಕಾರ ರಾಜ್ಯಪಾಲರಿಗಿಲ್ಲ. ಸರ್ಕಾರ ಬರೆದು ಕೊಟ್ಟ ಭಾಷಣವನ್ನು ಸಂಪೂರ್ಣವಾಗಿ ಓದಬೇಕು. ಸಂವಿಧಾನದ ವಿರುದ್ಧ ಇದ್ದರೂ ಓದುವುದು ಅನಿವಾರ್ಯ. ಬೇರೆ ಯಾವುದನ್ನೂ ತಾವು ಸೇರಿಸುವಂತೆಯೇ ಇಲ್ಲ ಎಂದರು.

ಇದೇ ವೇಳೆ ಸರ್ಕಾರಕ್ಕೂ ಜವಾಬ್ದಾರಿ ಇರುತ್ತದೆ. ರಾಜ್ಯಪಾಲರಿಗೆ ಇರಿಸು ಮುರಿಸು ಆಗುವಂತಹ ಸಂಗತಿಗಳನ್ನು ಭಾಷಣದಲ್ಲಿ ಸೇರಿಸಬಾರದು. ಸಂವಿಧಾನ ಬದ್ಧವಾಗಿಯೇ ಭಾಷಣ ಸಿದ್ಧಪಡಿಸಬೇಕು. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಬೇರೆ ಬೇರೆ ಸರ್ಕಾರಗಳು ಇರುವಾಗ ಇಂತಹ ಘಟನೆಗಳು ನಡೆಯುತ್ತವೆ. ಇಲ್ಲದಿದ್ದರೆ ಸಮಸ್ಯೆ ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಹಿಂದೆ ನಮಲ್ಲಿಯೂ ರಾಜ್ಯಪಾಲರು ಒಂದೆರಡು ಸಾಲುಗಳನ್ನು ಬಿಟ್ಟು ಭಾಷಣ ಓದಿದ್ದರು.

ಈ ರೀತಿ ಮಾಡಿದರೆ ಸರ್ಕಾರಕ್ಕೆ ಇರಿಸು ಮುರಿಸು ಮಾಡಿದಂತಾಗುತ್ತದೆ. ಆದರೆ, ಈಗಿರುವ ರಾಜ್ಯಪಾಲರಿಗೆ ಇದು ಮೂರನೇ ಜಂಟಿ ಅಧಿವೇಶನ, ಹಾಗಾಗಿ ಯಾವುದೇ ಸಮಸ್ಯೆ ಆಗಲಾರದು ಎಂಬ ವಿಶ್ವಾಸವಿದೆ ಎಂದು ಹೇಳಿದರು.

ತಮಿಳ್ನಾಡು, ಕೇರಳ ಆಯ್ತು. ಈಗ ಕರ್ನಾಟಕದಲ್ಲೂ ಗವರ್ನರ್ VS ಗವರ್ನಮೆಂಟ್

# ನರೇಗಾ ಭಾಷಣ್ ನಹೀ ಕರೇಗಾ!


**ಇಂದು ಜಂಟಿ ಅಧಿವೇಶನ: ಗೌರ್ನರ್ ಭಾಷಣ | ನರೇಗಾ ರದ್ದತಿ ಸೇರಿ ಕೇಂದ್ರದ ಕೆಲವು ನಿರ್ಧಾರಗಳನ್ನು ರಾಜ್ಯಪಾಲರಿಂದಲೇ ಟೀಕಿಸಲು ಸರ್ಕಾರ ತಂತ್ರ ನರೇಗಾ ಸೇರಿ ಕೇಂದ್ರ ವಿರುದ್ಧದ 11 ಅಂಶ ಕೈಬಿಡಲು ಸರ್ಕಾರಕ್ಕೆ ರಾಜ್ಯಪಾಲ ಪತ್ರ | ಸಿದ್ಧ ಭಾಷಣ ಓದಬೇಕೆಂದು ಸರ್ಕಾರ ಪಟ್ಟು | ಸಂಘರ್ಷ ತಾರಕಕ್ಕೆ ಕಲಾಪಕ್ಕೆ ಗೌರ್ನರ್ ಬರ್ತಾರಾ? | ಬಂದರೂ ಪೂರ್ತಿ ಭಾಷಣ ಓದುತ್ತಾರಾ? | ಆಕ್ಷೇಪಿಸಿದ ಅಂಶ ಕೈಬಿಡ್ತಾರಾ? | ಸಾಂವಿಧಾನಿಕ ಬಿಕ್ಕಟ್ಟು ಉಂಟಾಗುತ್ತಾ?**

■ ಉದಯವಾಣಿ ಸಮಾಚಾರ

ಬೆಂಗಳೂರು: ನೆರೆಯ ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಬೆನ್ನಲ್ಲೇ ಕರ್ನಾಟಕದಲ್ಲೂ ರಾಜ್ಯ ಸರ್ಕಾರ ಹಾಗೂ ಲೋಕಭವನದ ಮಧ್ಯೆ 'ಭಾಷಣ ಸಂಘರ್ಷ' ಸ್ಫೋಟಗೊಂಡಿದೆ. ರಾಜ್ಯದ ಇತಿಹಾಸದಲ್ಲೇ ಇಂಥದೊಂದು ಅಪರೂಪದ ಬೆಳವಣಿಗೆ ನಡೆದಿದ್ದು, ಗುರುವಾರ ನಡೆಯಲಿರುವ ಜಂಟಿ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿರುವ ಆಕ್ಷೇಪಾರ್ಹ ವಿಚಾರಗಳನ್ನು ಓದುವುದಿಲ್ಲ ಎಂದು ರಾಜ್ಯಪಾಲರು ಸರ್ಕಾರಕ್ಕೆ ಖಡಕ್ ಸಂದೇಶ ರವಾನಿಸಿದ್ದಾರೆ. ಸಂವಿಧಾನದ ಪ್ರಕಾರ ರಾಜ್ಯಪಾಲರು ಸರ್ಕಾರ ಕೊಟ್ಟ ಭಾಷಣವನ್ನೇ ಓದಬೇಕೆಂದು ಸರ್ಕಾರ ಪಟ್ಟು ಹಿಡಿದಿದೆ. ಹೀಗಾಗಿ ಗುರುವಾರದಿಂದ ಆರಂಭವಾಗುವ ಜಂಟಿ ಅಧಿವೇಶನದ ಮೇಲೆ ವಿವಾದದ ಛಾಯೆ ಆವರಿಸಿದೆ.

ನರೇಗಾ ರದ್ದತಿ ಸೇರಿದಂತೆ ಕೇಂದ್ರದ ಕೆಲವು ನಿರ್ಧಾರಗಳನ್ನು ಭಾಷಣದ ಮೂಲಕ ಕೇಂದ್ರವೇ ನಿಯುಕ್ತಿಗೊಳಿಸಿರುವ ರಾಜ್ಯಪಾಲರಿಂದಲೇ ಟೀಕಿಸಲು ಸರ್ಕಾರ ತಂತ್ರ ಹೆಣೆದಿತ್ತು. ಆದರೆ, ಅಧಿವೇಶನ ಆರಂಭಕ್ಕೆ ಮುನ್ನವೇ ರಾಜ್ಯಪಾಲರು, ನರೇಗಾ ಸೇರಿ ಕೇಂದ್ರ ವಿರುದ್ಧದ 11 ಅಂಶ ಕೈಬಿಡುವಂತೆ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ಪ್ರತಿತಂತ್ರ ಹೆಣೆದರು. ಈ ಬೆಳವಣಿಗೆ ರಾಜ್ಯಪಾಲರು ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆಯೋ, ಇಲ್ಲವೋ ಎಂಬ ಕುತೂಹಲ ಸೃಷ್ಟಿಯಾಗಿದೆ. ರಾಜಭವನ ಹಾಗೂ ಸರ್ಕಾರದ ಮೂಲಗಳ ಪ್ರಕಾರ ಅಧಿವೇಶನ ಆರಂಭದ ಕೊನೆಯ ಕ್ಷಣದವರೆಗೂ ಈ ಹಗ್ಗಜಗ್ಗಾಟ ಮುಂದುವರಿಯಲಿದ್ದು, ಆಕ್ಷೇಪಾರ್ಹ ಪ್ಯಾರಾಗಳನ್ನು ಬಿಟ್ಟು ಸರ್ಕಾರದ ಭಾಷಣವನ್ನು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಓದುವ ಸಾಧ್ಯತೆ ಇದೆ. ಜಂಟಿ ಅಧಿವೇಶನ ಕುರಿತಂತೆ ಸರ್ಕಾರ ಹಾಗೂ ಸಚಿವರು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ರಾಜ್ಯಪಾಲರು ಬುಧವಾರ ಈ ಬಗ್ಗೆ ತಮ್ಮ ಆಕ್ಷೇಪಗಳನ್ನು ಸರ್ಕಾರಿ ಶಿಷ್ಟಾಚಾರದ ಪ್ರಕಾರ ಅನಾವರಣಗೊಳಿಸಿದರು.

▶ 6ನೇ ಪುಟಕ್ಕೆ



ಕಾನೂನು ಸಚಿವ ಎಚ್.ಕೆ. ಪಾಟೀಲ್, ಸ್ಪೀಕರ್ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ರಾಜ್ಯ ಸರ್ಕಾರದ ನಿಯೋಗವು ಬುಧವಾರ ರಾಜ್ಯಪಾಲರನ್ನು ಭೇಟಿ ಮಾಡಿ 'ಭಾಷಣ ಸಂಘರ್ಷ' ಕುರಿತು ಮನವೊಲಿಸಲು ಯತ್ನಿಸಿತು.

## ಸರ್ಕಾರದ ತಂತ್ರವೇನಿತ್ತು?

- ಕೇಂದ್ರದಿಂದ ನರೇಗಾ ಯೋಜನೆ ರದ್ದು ನಿರ್ಧಾರ ಖಂಡಿಸಿ ವಿಶೇಷ ಅಧಿವೇಶನ ಕರೆಯಲು ಸರ್ಕಾರ ನಿರ್ಧಾರ
- ಕೆಲ ಕಾನೂನು ತೊಡಕಿನ ಹಿನ್ನೆಲೆಯಲ್ಲಿ ವಿಶೇಷ ಜಂಟಿ ಅಧಿವೇಶನ ಕರೆಯುವ ಮೂಲಕ ಕೇಂದ್ರ ಸರ್ಕಾರದ ನಡೆಗೆ ಪ್ರತಿರೋಧ ತೋರಲು ನಿರ್ಧಾರ
- ಆದರೆ, ವರ್ಷದ ಮೊದಲ ಅಧಿವೇಶನ ರಾಜ್ಯಪಾಲರ ಭಾಷಣದಿಂದಲೇ ಆರಂಭವಾಗಬೇಕೆಂಬ ಸಂಪ್ರದಾಯ ಕಾರಣ, ರಾಜ್ಯಪಾಲರ ಭಾಷಣದಲ್ಲೇ ನರೇಗಾ ವಿಚಾರ ಸೇರಿಸಲು ಪ್ಲ್ಯಾನ್
- ಭಾಷಣದ ಮೂಲಕ ರಾಜ್ಯಪಾಲರ ಬಾಯಿಯಿಂದಲೇ ಕೇಂದ್ರದ ಲೋಪ ದೋಷಗಳನ್ನು ಹೇಳಿಸುವ ತಂತ್ರ

## ಗೌರ್ನರ್ ಪ್ರತಿತಂತ್ರವೇನು?

- ತಮ್ಮ ಮೂಲಕ ಕೇಂದ್ರವನ್ನು ಟೀಕಿಸುವ ತಂತ್ರವನ್ನು ಮನಗಂಡು ಜಂಟಿ ಅಧಿವೇಶನ ನಡೆಯುವ 1 ದಿನದ ಮುಂಚೆ ತಮ್ಮ ಆಕ್ಷೇಪಗಳನ್ನು ಅನಾವರಣಗೊಳಿಸಿದ ರಾಜ್ಯಪಾಲರು
- ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಲೋಕಭವನಕ್ಕೆ ಕರೆಸಿಕೊಂಡ ರಾಜ್ಯಪಾಲರು
- ಸರ್ಕಾರ ಭಾಷಣದ ಬಗ್ಗೆ ಆಕ್ಷೇಪ. ಕೇಂದ್ರ ಸರ್ಕಾರದ ನೀತಿಗಳಿಗೆ ವಿರುದ್ಧ ವಿಚಾರಗಳನ್ನು ಭಾಷಣದಲ್ಲಿ ಸೇರ್ಪಡೆ ಮಾಡದಿರಲು ಸೂಚನೆ.
- ಒಪ್ಪದಿದ್ದರೆ ಅಧಿವೇಶನದಲ್ಲಿ ಭಾಷಣ ಸಾಧ್ಯತೆ ಬಗ್ಗೆ ವಿಚಾರ ಮಾಡಬೇಕಾಗುತ್ತದೆ ಎಂಬ ಸಂದೇಶ ರವಾನೆ

## ಸರ್ಕಾರದ ಆಯ್ಕೆಗಳು

- ರಾಜ್ಯಪಾಲರೇ ಆಕ್ಷೇಪಿಸಿರುವ ಕೆಲವು ಪ್ಯಾರಾಗಳನ್ನು ಪರಿಷ್ಕರಿಸುವ ಮೂಲಕ ರಾಜ್ಯಪಾಲರ ಮನವೊಲಿಸಬಹುದು.
- ಈಗಾಗಲೇ ಸರ್ಕಾರ ಸಿದ್ಧಪಡಿಸಿರುವ ಭಾಷಣದಲ್ಲಿ ಯಾವುದೇ ಬದಲಾವಣೆ ಮಾಡದೇ ಅದೇ ಭಾಷಣ ಓದುವಂತೆ ಸಂದೇಶವನ್ನು ರವಾನಿಸಬಹುದು.
- ಒಂದು ವೇಳೆ ರಾಜ್ಯಪಾಲರು ಜಂಟಿ ಅಧಿವೇಶನಕ್ಕೆ ಬಾರದಿದ್ದರೆ ಕಾನೂನು ಹೋರಾಟಕ್ಕೆ ಮುಂದಾಗಬಹುದು.
- ರಾಜ್ಯ ಸರ್ಕಾರ ಮತ್ತು ಲೋಕಭವನದ ನಡುವೆ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸುವ ತನಕ ಅಧಿವೇಶನದ ದಿನಾಂಕವನ್ನು ಮರು ನಿಗದಿ ಮಾಡಬಹುದು

## 7 ಅಂಶ ಪರಿಷ್ಕರಣೆಗೆ ಸಿದ್ಧ

"ರಾಜ್ಯಪಾಲರು, ರಾಷ್ಟ್ರಪತಿ ಎಲ್ಲರಿಗೂ ಒಂದೇ ಸಂವಿಧಾನ. ಭಾಷಣದ 11 ಪ್ಯಾರಾ ಬದಲಿಸುವಂತೆ ರಾಜ್ಯಪಾಲರು ಸೂಚಿಸಿದ್ದಾರೆ. ಆದರೆ, ರಾಜ್ಯದ ಹಿತ ಕಾಯುವ ಆ ಅಂಶಗಳನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಬದಲಿಗೆ 7 ಅಂಶ ಪರಿಷ್ಕರಣೆಗೆ ನಿರ್ಧರಿಸಿದ್ದೇವೆ.

• **ಎಚ್.ಕೆ.ಪಾಟೀಲ್**, ಕಾನೂನು ಸಚಿವ

## ನಿಯಮದಂತೆ ನಡೀತಾರೆ

"ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಸಂವಿಧಾನ ಹಾಗೂ ನಿಯಮ ಪ್ರಕಾರ ನಡೆದುಕೊಳ್ಳುತ್ತಾರೆ. ಗವರ್ನರ್ ಹಿರಿಯರು, ಅನುಭವಿಗಳು. ವಿಶೇಷ ಅಧಿವೇಶನ ಹೇಗೆ ನಡೆಯಬೇಕೆಂಬುದನ್ನು ಕಲಾಪ ಸಲಹಾ ಸಭೆಯಲ್ಲಿ ನಿರ್ಣಯಿಸುತ್ತೇವೆ.

• **ಯು.ಟಿ.ಖಾದರ್**, ಸ್ಪೀಕರ್

## ತಮ್ಮಿಚ್ಛೆಯಂತೆ ವರ್ತನೆ ಸಲ್ಲ

"ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಬರೆದುಕೊಟ್ಟಿದ್ದನ್ನು ಮಾತ್ರ ಓದಲು ಅವಕಾಶ ಇರುತ್ತದೆ ಹೊರತು, ತಮ್ಮ ಮನಸಿಗೆ ಬಂದಿದ್ದನ್ನು ಹೇಳಲು ಅವಕಾಶ ಇಲ್ಲ. ಹಾಗಾಗಿ ಇಲ್ಲಿ ಗವರ್ನರ್-ಸರ್ಕಾರ ಮಧ್ಯೆ ಸಂಘರ್ಷ ಉಂಟಾಗದು.

• **ಬಸವರಾಜ ಹೊರಟ್ಟಿ**, ಸಭಾಪತಿ

## ಭಾಷಣ ಓದಲೇಬೇಕು

"ರಾಜ್ಯಪಾಲರಿಗೆ ಭಾಷಣ ತಲುಪಿಸಿದ್ದೇವೆ. ಹಲವು ವಿಚಾರಗಳಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕೆಲ ವಿಚಾರಗಳನ್ನು ಪರಿಷ್ಕರಣೆ ಮಾಡಲು ನಾವು ಸಿದ್ಧ. ಆದರೆ ಸರ್ಕಾರದ ಆಶಯಗಳನ್ನ ಕೈ ಬಿಡಿ ಎನ್ನುವುದು ಸರಿಯಲ್ಲ. ಅವರು ಸರ್ಕಾರದ ಭಾಷಣ ಓದಲೇಬೇಕು.

• **ಪೊನ್ನಣ್ಣ**, ಸಿಎಂ ಕಾನೂನು ಸಲಹೆಗಾರ

## ಗೌರ್ನರ್ ಬಾರದೇ ಇದ್ದರೆ ಸುಪ್ರೀಂ ಕೋರ್ಟ್‌ಗೆ ಸರ್ಕಾರ?

ಬೆಂಗಳೂರು: ಜಂಟಿ ಅಧಿವೇಶನಕ್ಕೆ ಸಂಬಂಧಪಟ್ಟಂತೆ ಭಾಷಣ ಮಾಡಲು ನಿರಾಕರಿಸಿರುವ ರಾಜ್ಯಪಾಲ ಗೆಹಲೋತ್ ಜತೆ ಸಂಧಾನ ಮಾಡುತ್ತಿರುವ ಮಧ್ಯೆಯೇ ರಾಜ್ಯ ಸರ್ಕಾರ ಕಾನೂನು ಹೋರಾಟದ ಸಾಧ್ಯತೆ ಬಗ್ಗೆಯೂ ಸಿದ್ಧತೆ ನಡೆಸಿದೆ. ಗುರುವಾರ ಬೆಳಗ್ಗೆ 11.15ರೊಳಗೆ ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ಆಗಮಿಸದೇ ಇದ್ದರೆ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದ ಮುಂದೆ ರಾಜ್ಯಪಾಲರ ನಡೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ತಿಳಿದು ಬಂದಿದೆ.

▶ ವಿವರ: 7

## ಜಂಟಿ ಅಧಿವೇಶನ ನಡೆಯದಿದ್ದರೆ ಬಜೆಟ್ ಮಂಡನೆಯೂ ಅಸಾಧ್ಯ

- ವರ್ಷದ ಮೊದಲ ಅಧಿವೇಶನದಲ್ಲಿ ಗೌರ್ನರ್ ದಿಕ್ಸೂಚಿ ಭಾಷಣ ಮಾಡಬೇಕು
- ಮಾಡದಿದ್ದರೆ ಅಥವಾ ಗೈರಾದರೆ ಜಂಟಿ ಅಧಿವೇಶನ/ ಕಲಾಪ ನಡೆಸಲಾಗದು
- ಅಷ್ಟೇ ಅಲ್ಲ, ಅಧಿವೇಶನ ನಡೆಸದೆ ಬಜೆಟ್ ಅಧಿವೇಶನವನ್ನೂ ನಡೆಸಲು ಸಾಧ್ಯವಿಲ್ಲ.
- ರಾಜ್ಯ ಸರ್ಕಾರವು ತನ್ನ ಭವಿಷ್ಯದ ಯೋಜನೆಗಳನ್ನು ರಾಜ್ಯಪಾಲರ ಭಾಷಣದ ಮೂಲಕವೇ ತೆರೆದಿಡಬೇಕು.
- ರಾಜ್ಯಪಾಲರ ಭಾಷಣ ಬಿಟ್ಟು ಕಲಾಪ ಮುಂದುವರಿಸಲು ಯತ್ನಿಸಿದರೆ, ಕೋರ್ಟ್‌ನಲ್ಲಿ ಪ್ರಶ್ನಿಸುವ ಅವಕಾಶ.
- ಇದು ಸಾಂವಿಧಾನಿಕ ಬಿಕ್ಕಟ್ಟಿಗೆ ಕಾರಣವಾಗುವ ಸಾಧ್ಯತೆ

▶ ವಿವರ: 7

7
ಬೆಂಗಳೂರು ಉದಯವಾಣಿ
ಗುರುವಾರ, ಜನವರಿ 22, 2026

# ಗೌರ್ನರ್ ಮನಸ್ಸಿಗೆ ಬಂದಿದ್ದನ್ನು ಹೇಳುವಂತೆ ಇಲ್ಲ: ಹೊರಟ್ಟಿ

ಬೆಂಗಳೂರು: ಜಂಟಿ ಅಧಿವೇಶನ ಉದ್ದೇಶಿಸಿ ಮಾಡುವ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಬರೆದುಕೊಟ್ಟಿದ್ದನ್ನು ಮಾತ್ರ ಓದಲು ಅವಕಾಶ ಇರುತ್ತದೆ ಹೊರತು, ತಮ್ಮ



ಮನಸಿಗೆ ಬಂದಿದ್ದನ್ನು ಹೇಳಲು ನಿಯಮದಲ್ಲಿ ಅವಕಾಶ ಇಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸಂಪುಟದಲ್ಲಿ ಅನುಮೋದನೆಗೊಂಡ ಭಾಷಣವನ್ನು ಓದುವುದು ರಾಜ್ಯಪಾಲರ ಕರ್ತವ್ಯ. ಆ ಭಾಷಣದಲ್ಲಿ ತಮ್ಮ ಸಾಲುಗಳನ್ನು ಸೇರಿಸಲು ಬರುವುದಿಲ್ಲ. ಆ ಸ್ಥಾನದಲ್ಲಿ ಕುಳಿತಾಗ ಅದು ಅನಿವಾರ್ಯ ಎಂದು ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.